ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಚುನಾವಣೆ/ಅಪೆಕ್ಸ್/ಸ.ಜಿ.ಚು.ಅ/ 41 /2015

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
ದಿನಾಂಕ: 01.04.2015.

**ವಿಷಯ:-** 2015ನೇ ಸಾಲಿನಲ್ಲಿ ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸಲು ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳಿಗೆ ನೆರವಾಗಲು ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಬಗ್ಗೆ.

**ಉಲ್ಲೇಖ:-**
01. ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ : ಸಚುಪ್ರಾ/ಆಡಳಿತ/ಚುನಾವಣೆ/96/2014/971 ದಿನಾಂಕ : 05.03.2015.
02. ಪ್ರಾಧಿಕಾರದ ಆದೇಶ ಸಮಖ್ಯೆ : ಸಚುಪ್ರಾ/ಚುನಾವಣೆ/ಜಿಚುಅ/ಅಪೆಕ್ಸ್/104/2014/975 ದಿನಾಂಕ : 05.03.2015.
03. ಹೆಚ್ಚುವರಿ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ : ಚುನಾವಣೆ/ವಿವ/37/2014-15 ದಿನಾಮಕ : 25.03.2015.

★★★★★

<u>ಪ್ರಸ್ತಾವನೆ :-</u> ರಾಜ್ಯದಲ್ಲಿನ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಸಂಬಂಧ ಪ್ರಾಧಿಕಾರವು ಉಲ್ಲೇಖ(1)ರಲ್ಲಿ ಕಾಣಿಸಿರುವ ಪತ್ರದಂತೆ ಈಗಾಗಲೇ ಅಧಿಸೂಚನೆಯನ್ನು ಹೊರಡಿಸಿದ್ದು ಚುನಾವಣಾ ದಿನಾಂಕಗಳನ್ನು / ಅವಧಿಯನ್ನು ನಿಗದಿಪಡಿಸಲಾಗಿರುತ್ತದೆ. ಪ್ರಾಧಿಕಾರದ ಉಲ್ಲೇಖ(2)ರ ಆದೇಶದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ಮತ್ತು ಮೈಸೂರು ಇವರುಗಳನ್ನು ರಾಜ್ಯ ಮಟ್ಟದ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಪ್ರಾದೇಶಿಕ ಆಯುಕ್ತರು, ಬೆಂಗಳೂರು ಇವರಿಗೆ ನೆರವಾಗಲು ಉಲ್ಲೇಖ(3)ರ ಕೋರಿಕೆಯಂತೆ 2015ನೇ ಸಾಲಿನಲ್ಲಿ ನಡೆಯಲಿರುವ ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸಲು ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳಿಗೆ ನೆರವಾಗಲು ಸಹಾಯಕ ಜಿಲ್ಲಾಚುನಾವಣಾಧಿಕಾರಿಗಳನ್ನು ನೇಮಕ ಮಾಡುವ ಅವಶ್ಯಕತೆ ಇದೆ ಎಂಬುದನ್ನು ಪ್ರಾಧಿಕಾರವು ಮನಗಂಡು ಶ್ರೀಡಿ.ಎಂ.ಶಿವಕುಮಾರ್, ಹೆಚ್ಚುವರಿ ಆಯುಕ್ತರು (ಭೂನಿರ್ವಹಣೆ, ಯೋಜನೆ ಮತ್ತು ಇತರೆ) ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಮತ್ತು ಶ್ರೀ ಡಿ.ಸಿ.ದೇವರಾಜ್, ಜಂಟಿನಿಬಂಧಕರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರುಗಳನ್ನು ಅಪೆಕ್ಸ್ ಸಹಕಾರ ಸಂಘಗಳು / ಸಹಕಾರಿಗಳ ಚುನಾವಣೆ ನಡೆಸಲು ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

# ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(1), 39ಎಎ(2) ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ-2(ಐ-1) ಮತ್ತು 13ಸಿ ಗಳ ಅಡಿಯಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಎನ್.ಸಿ.ಮುನಿಯಪ್ಪ, ಸಹಕಾರ ಚುನಾವಣಾ ಪ್ರಾಧಿಕಾರದ ಆಯುಕ್ತನಾದ ನಾನು, ಶ್ರೀ ಡಿ.ಎಂ.ಶಿವಕುಮಾರ್, ಹೆಚ್ಚುವರಿ ಆಯುಕ್ತರು (ಭೂನಿರ್ವಹಣೆ, ಯೋಜನೆ ಮತ್ತು ಇತರೆ) ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಮತ್ತು ಶ್ರೀ ಡಿ.ಸಿ.ದೇವರಾಜ್, ಜಂಟಿನಿಬಂಧಕರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರುಗಳನ್ನು ಪ್ರಾದೇಶಿಕ ಆಯುಕ್ತರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರಿಗೆ ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿದ್ದೇನೆ. ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳು, ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿಗಳ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಜಿಲ್ಲಾಚುನಾವಣಾಧಿಕಾರಿಗಳಾದ ಪ್ರಾದೇಶಿಕ ಆಯುಕ್ತರು, ಬೆಂಗಳೂರು ಇವರಿಗೆ ನೆರವಾಗಲು ಹಾಗೂ ಅವರ ನಿರ್ದೇಶನ / ಮಾರ್ಗದರ್ಶನದಂತೆ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ಈ ಆದೇಶವನ್ನು ನನ್ನ ಸ್ವಹಸ್ತ ಹಾಗೂ ಪ್ರಾಧಿಕಾರದ ಮೊಹರಿನೊಡನೆ ಈ ದಿವಸ ಅಂದರೆ ದಿನಾಂಕ : 01.04.2015 ರಂದು ಹೊರಡಿಸಲಾಗಿದೆ.

(ಎನ್.ಸಿ.ಮುನಿಯಪ್ಪ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

ಇವರಿಗೆ,

**01.** **ಶ್ರೀ ಡಿ.ಎಂ.ಶಿವಕುಮಾರ್, ಹೆಚ್ಚುವರಿ ಆಯುಕ್ತರು (ಭೂನಿರ್ವಹಣೆ, ಯೋಜನೆ ಮತ್ತು ಇತರೆ) ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ಹಾಗೂ ಸಹಾಯಕ ಜಿಲ್ಲಾ ಚುನಾವಣಾಧಿಕಾರಿ (ಅಪೆಕ್ಸ್ ಸಂಘಗಳು) ಬೆಂಗಳೂರು.**

**02.** **ಶ್ರೀ ಡಿ.ಸಿ.ದೇವರಾಜ್, ಜಂಟಿನಿಬಂಧಕರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಹಾಗೂ ಸಹಾಯಕ ಜಿಲ್ಲಾ ಚುನಾವಣಾಧಿಕಾರಿ (ಅಪೆಕ್ಸ್ ಸಂಘಗಳು).**

ಪ್ರತಿಗಳು :-

01. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
02. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಆಲಿಆಸ್ಕರ್ ರಸ್ತೆ, ಬೆಂಗಳೂರು.
03. ಪ್ರಾದೇಶಿಕ ಆಯುಕ್ತರು, ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು (ಅಪೆಕ್ಸ್ ಸಂಘಗಳು) ಬೆಂಗಳೂರು ಪ್ರಾಂತ, ಬೆಂಗಳೂರು.
04. ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಉತ್ತರವಲಯ, ದಕ್ಷಿಣವಲಯ, ಕೇಂದ್ರ ವಲಯ ಮತ್ತು ಸಹಕಾರ ಸಂಘಗಳ ಉಪನಿಬಂಧಕರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
05. ಸಹಕಾರ ಚುನಾವಣಾ ಪ್ರಾಧಿಕಾರದ ಜಂಟಿ ನಿಬಂಧಕರು / ಉಪಕಾರ್ಯದರ್ಶಿ / ಉಪನಿಬಂಧಕರು / ಸಹಾಯಕ ನಿಬಂಧಕರು, ಬೆಂಗಳೂರು ಪ್ರಾಂತ / ಮೈಸೂರು ಪ್ರಾಂತ / ಬೆಳಗಾವಿ ಪ್ರಾಂತ / ಕಲಬುರಗಿ ಪ್ರಾಂತ.
06. ಕಛೇರಿ ಆದೇಶ / ರಕ್ಷಾಕಡತಕ್ಕೆ.